**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

**S.C No.: 25/2017**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **2**
ಸಿ.ಡಬ್ಲ್ಯೂ ನಂಃ **2**
ಸಾಕ್ಷಿಯನ್ನು ದಿನಾಂಕಃ **20-12-2022**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಗ್ಯಾನಪ್ಪ |
| ತಂದೆಯ ಹೆಸರು | ಃ | ಹನುಮಪ್ಪ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸ ಸ್ಥಳ | ಃ | ವಣಗೇರಿ |

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ 3 ಎಂದು ಸಹಿಯನ್ನು ನಿಪಿ 3(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಕುರುಬನಾಳ ಗ್ರಾಮದಲ್ಲಿ ಮಾಡಿದ್ದು, ಮಂಜುಳಾಳ ಶವ ಪಂಚನಾಮೆ ಕಾಲಕ್ಕೆ ದಿಃ 17-3-2016 ರಂದು ಮದ್ಯಾಹ್ನ 1 ರಿಂದ 3 ಗಂಟೆಯ ಅವಧಿಯಲ್ಲಿ ಸಹಿ ಮಾಡಿದ್ದೇನೆ. ನನ್ನ ಜೊತೆ ಪರಶುರಾಮ ಮತ್ತು ಮಹಾದೇವಿ ಇದ್ದರು. ಸದರಿ ಮಹಜರನ್ನು ಬರೆದು ಓದಿ ಹೇಳಿದ ನಂತರ ಸಹಿ ಪಡೆದಿದ್ದಾರೆ. ನಿಪಿ 2 ಫೋಟೋದಲ್ಲಿ ನಾನು ಕಾಣುತ್ತೇನೆ.

ಪಾಟೀ ಸವಾಲು ಃ 2 ನೇ ಆರೋಪಿ ಪರ ಶ್ರೀ ಎಸ್ ವೈ ಬಿ ವಕೀಲರಿಂದ

ಮೃತ ಮಂಜುಳಾ ನನ್ನ ಸಂಬಂಧಿ ಅಲ್ಲ. ಪೊಲೀಸರು ಬೆಳಿಗ್ಗೆ 11-30 ಗಂಟೆಗೆ ಫೋನು ಮಾಡಿ ಕರೆಸಿದ್ದರು. ಫೋನು ಬಂದ ನಂತರ ಆ ಗುಡ್ಡದ ಬಳಿ ನೇರವಾಗಿ ಹೋದೆ. ಕುಷ್ಟಗಿ - ಹೊಸಪೇಟೆ ರಸ್ತೆಯ ಪೂರ್ವಕ್ಕೆ ಆ ಗುಡ್ಡ ಇದೆ. ಸದರಿ ರಸ್ತೆಯಿಂದ 1 ಕಿ ಮೀ ದೂರದಲ್ಲಿದೆ. ಆ ಶವ ರಸ್ತೆಯ ಪಕ್ಕ ಬಿದ್ದಿತ್ತು. ಮಹಾದೇವಿ ಎನ್ನುವವರ ಜಮೀನಿನಲ್ಲಿತ್ತು. ಅದರ ಸರ್ವೇ ನಂಬರ ಗೊತ್ತಿಲ್ಲ. ನಾನು ಪಂಚನಾಮೆಗೆ ಮಾಹಿತಿ ಕೊಟ್ಟು ಬರೆಸಿಲ್ಲ. ಪಂಚನಾಮೆಯನ್ನು ಓದಿ ಹೇಳಿದ್ದರು.

ತಲೆ ಕುಷ್ಟಗಿ ಕಡೆ ಇತ್ತು. ಶವದ ಮೈಮೇಲಿನ ಬಟ್ಟೆ ಅರ್ಧಮರ್ಧ ಸುಟ್ಟಿತ್ತು. ಒಂದು ಮೋಬೈಲ ಮತ್ತು ಚಪ್ಪಲಿ ಇತ್ತು. ಭುಜ, ಬಾಯಿ, ಎಡಭಾಗದ ಹಣೆ ಸುಟ್ಟಿತ್ತು. ಪಂಚನಾಮೆಯನ್ನು ಪೊಲೀಸರು ಬರೆದರು. ರೈಟರ ಬರೆದರು. ಪಂಚನಾಮೆಯನ್ನು ಬರೆದ ಸ್ಥಳದ ಚೆಕ್ಕಬಂದಿ - ಪೂರ್ವ ಪಶ್ಚಿಮಕ್ಕೆ ಕಂದಕೂರು ರಸ್ತೆ ಇದೆ, ಉತ್ತರಕ್ಕೆ ಮಹಾದೇವಿಯವರ ಜಮೀನು, ದಕ್ಷಿಣಕ್ಕೆ - ಗುಡ್ಡ ಇದೆ.

ನಾನು ಪಂಚನಾಮೆಗೆ ಒಂದು ಸಹಿ ಮಾಡಿದ್ದೇನೆ. ಪರಶುರಾಮ ಮತ್ತು ಮಹಾದೇವಿಯವರ ಸಮಕ್ಷಮ ಪೊಲೀಸರ ಪಂಚನಾಮೆ ಮಾಡಿದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ, ಸದರಿ ಸಹಿಯನ್ನು ಠಾಣೆಯಲ್ಲಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಫಿರ್ಯಾದಿ ಮತ್ತು ಮೃತ ಮಂಜುಳಾ ನಮ್ಮ ಕುಲದವರು ಎಂದು ಫಿರ್ಯಾದಿಯ ಮಾತು ಕೇಳಿ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ಫೋಟೋ ಆ ಸ್ಥಳದಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : **1** ನೇ ಆರೋಪಿ ಪರ ವಕೀಲರಿಂದ</u>

ಮೇಲಿನ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಉಕ್ತ ಉಲ್ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಶ್ರೀಮತಿ ಬಿ. ಎಸ್ ರೇಖಾ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ